**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಜೇವರ್ಗಿ.**

**ಸಿ.ಸಿ.ನಂಃ 366/2025**

ಪಿರ್ಯಾದಿಃ ಕರ್ನಾಟಕ ರಾಜ್ಯ (ಜೇವರ್ಗಿ ಪೊಲೀಸ್‌ರಿಂದ)

ವಿರುದ್ಧ

ಆರೋಪಿಃ 1 ರೇಣುಕಾ ಗಂಡ ಶರಣಬಸಪ್ಪ ಗೋಳೇದ,
ವಯಸ್ಸುಃ 39 ವರ್ಷ, ಉಃ ಮನೆಕೆಲಸ
ವಾಸಃ ಕಟ್ಟಿಸಂಗಾವಿ, ತಾಃ ಜೇವರ್ಗಿ
ಹಾಲಿ ವಸತಿಃ ಬಸವೇಶ್ವರ ನಗರ, ಜೇವರ್ಗಿ
ತಾಃ ಜೇವರ್ಗಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿಯ ಹೇಳಿಕೆಗಳು**

**ಪ್ರಶ್ನೆ :1:** ಈ ಪ್ರಕರಣದಲ್ಲಿ ವಿಚಾರಣೆಯಾಗಿರುವ ಸಾಕ್ಷಿದಾರರ ಸಾಕ್ಷ್ಯಗಳನ್ನು ಕೇಳಿರುವಿರಾ?
ಉಃ

**ಪ್ರಶ್ನೆ :2: ಪ್ರಾ.ಸಾಃ 3 ಕರುಣಾಸಾಗರ**ರವರು ತಮ್ಮ ಸಾಕ್ಷ್ಯದಲ್ಲಿ, 4-5 ತಿಂಗಳ ಹಿಂದೆ ತಾವು ಆಂದೋಲಾದಲ್ಲಿದ್ದಾಗ ಆಗ ಬೆಳಿಗ್ಗೆ 7 ಗಂಟೆಗೆ ಚಾಸಾ-9ರವರು ಫೋನ್ ಮಾಡಿ ಬಂಗಾರ ಕಳವು ಆಗಿದೆ ಎಂದು ತಿಳಿಸಿದ ತಕ್ಷಣ ತಾನು ಬಣಮಿಗಿ ಗ್ರಾಮಕ್ಕೆ ಹೋಗಿ ನೋಡಿ ನಂತರ ಜೇವರ್ಗಿಗೆ ಬಂದು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದು ಹಾಗೂ ಚಾಸಾ-9ರವರ 3 ತೊಲೆ ಬಂಗಾರ ಮತ್ತು ಚಾಸಾ-10 ರವರ 14 ತೊಲೆ ಬಂಗಾರ ಕಳವು ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆ :3: ಪ್ರಾ.ಸಾಃ 4 ಪಾರ್ವತಿ**ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 8 ತಿಂಗಳ ಹಿಂದೆ ಮದುವೆಗಾಗಿ ತಾನು ಮತ್ತು ಚಾಸಾ-10 ರವರು ಮದುವೆಗೆ ಹೋಗಿ ಅಲ್ಲಿ ಬಂಗಾರ ಇಟ್ಟಿದ್ದೆವು ಅದು ಕಳವು ಆಗಿತ್ತು ಹಾಗೂ ಚಾಸಾ-1ರವರು ದೂರು ನೀಡಿರುತ್ತಾರೆ ಎಂದು ಹಾಗೂ ತನ್ನ 3 ತೊಲೆ ಬಂಗಾರದ ತಾಳಿಸಾಮಾನು ಮತ್ತು ಚಾಸಾ-10ರವರ ಬಂಗಾರದ ಗುಂಡಿನ ಸರ, 4 ಎಳೆ ಬಂಗಾರದ ತೊಳೆ ಇತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆ :4: ಪ್ರಾ.ಸಾಃ 5 ವಿಜಯಲಕ್ಷ್ಮೀ**ರವರು ತಮ್ಮ ಸಾಕ್ಷ್ಯದಲ್ಲಿ, ಸುಮಾರು 6 ತಿಂಗಳ ಹಿಂದೆ ಮದುವೆಗಾಗಿ ಬಣಮಿಗಿಗೆ ತಾನು ಮತ್ತು ಚಾಸಾ-9ರವರು ಹೋಗಿದ್ದಾಗ ಅಲ್ಲಿ ಇಟ್ಟಿದ್ದ ತಮ್ಮ ಬಂಗಾರ ಕಳವು ಆಗಿತ್ತು ಎಂದು ಹಾಗೂ ತನ್ನ 2 ಬಂಗಾರದ ಬಳೆಗಳು, ಒಂದು ಬಂಗಾರದ ಗುಂಡಿನ ಸರ ಮತ್ತು ಇನ್ನೊಂದು ಸರ ಕಳವು ಆಗಿತ್ತು ಎಂದು ಹಾಗೂ ಚಾಸಾ-9ರವರಿಗೆ ಸಂಬಂಧಪಟ್ಟ ತಾಳಿ ಸರ ಕಳವು ಆಗಿತ್ತು ಎಂದು ಹಾಗೂ ಚಾಸಾ-1ರವರು ಕೇಸ್ ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆ :5: ಪ್ರಾ.ಸಾಃ 7 ದುಂಡಪ್ಪ**ರವರು ತಮ್ಮ ಸಾಕ್ಷ್ಯದಲ್ಲಿ, 5-6 ತಿಂಗಳ ಹಿಂದೆ ಪೊಲೀಸರು ಬಂದು ತಮಗೆ ಮಹೇಶಗೌಡನ ಮನೆಗೆ ಕರೆದುಕೊಂಡು ಹೋಗಿ ಒಂದು ಫೋಟೊವನ್ನು ತೆಗೆದಿರುತ್ತಾರೆ ಎಂದು ಹಾಗೂ ಸದರಿ ಫೋಟೊದಲ್ಲಿ ತಾನು ಇರುವುದಾಗಿ ಒಪ್ಪಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆ :6: ಪ್ರಾ.ಸಾಃ 8 ಕುಮಾರಗೌಡ**ರವರು ತಮ್ಮ ಸಾಕ್ಷ್ಯದಲ್ಲಿ, 7 ತಿಂಗಳ ಹಿಂದೆ ಜೇವರ್ಗಿಯ ಪೊಲೀಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ ಎಂದು ಹಾಗೂ ತನ್ನ ಸಮಕ್ಷಮ ಬಂಗಾರದ ಆಭರಣಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ಹಾಗೂ ಪೊಲೀಸರು ಫೋಟೊ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆ :7: ಪ್ರಾ.ಸಾಃ 9 ಸಿದ್ದರಾಮ**ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-17ರವರ ಆದೇಶದ ಪ್ರಕಾರ ದಿನಾಂಕ 18-6-2025 ರಂದು ತನಗೆ ಮತ್ತು ಚಾಸಾ-16ರವರಿಗೆ ಆರೋಪಿತಳಿಗೆ ಕರೆದುಕೊಂಡು ಬರಲು ಹೇಳಿದ್ದರಿಂದ ತಾವು ಆರೋಪಿತಳ ಮನೆ ಹತ್ತಿರ ಹೋದಾಗ ಆರೋಪಿತಳು ಇರಲಿಲ್ಲ ಎಂದು ಹಾಗೂ ಆರೋಪಿತಳು ಪೊಲೀಸ್ ಠಾಣೆ ಹತ್ತಿರ ಹೋಗುತ್ತೇನೆ ಎಂದು ಹೇಳಿ ಹೋಗಿದ್ದಾಳೆ ಎಂದು ಬಾತ್ಮಿದಾರರ ಮುಖಾಂತರ ಗೊತ್ತಾದ ನಂತರ ತಾವು ಪೊಲೀಸ್ ಠಾಣೆಗೆ ಹೋಗಿರುತ್ತೇವೆ ಎಂದು ಹಾಗೂ ಮಧ್ಯಾಹ್ನ 2 ಗಂಟೆಗೆ ಆರೋಪಿತಳು ಪೊಲೀಸ್ ಠಾಣೆ ಹತ್ತಿರ ಹೋಗುತ್ತಿದ್ದಳು ಹಾಗೂ ಆರೋಪಿತಳನ್ನು ಕರೆದುಕೊಂಡು ಹೋಗಿ ಚಾಸಾ-17ರವರ ಮುಂದೆ ಹಾಜರುಪಡಿಸಿರುತ್ತೇವೆ ಎಂದು ಹಾಗೂ ನ್ಯಾಯಾಲಯದ ಮುಂದಿರುವ ಆರೋಪಿತಳನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆ :8: ಪ್ರಾ.ಸಾಃ 10 ಕಲಾವತಿ**ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 18-05-2025ರಂದು ಸಂಜೆ 4 ಗಂಟೆಗೆ ತಾನು SHO ಕರ್ತವ್ಯದಲ್ಲಿದ್ದಾಗ ಚಾಸಾ-1ರವರು ಬೆರಳಚ್ಚು ಮಾಡಿದಂತಹ ದೂರನ್ನು ನೀಡಿದ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ಹಾಗೂ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-17 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ

**ಪ್ರಶ್ನೆಃ 9** ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೇ?

ಉಃ

**ಪ್ರಶ್ನೆಃ 10** ಈ ಪ್ರಕರಣದಲ್ಲಿ ಯಾವುದಾದರೂ ನಿಮ್ಮ ಪರ ದಾಖಲಾತಿಗಳನ್ನು ಹಾಜರುಪಡಿಸುತ್ತೀರ?

ಉಃ

**ಪ್ರಶ್ನೆಃ 11** ಈ ಪ್ರಕರಣದಲ್ಲಿ ನೀವು ಏನಾದರೂ ಹೇಳುವದು ಇದೆಯಾ?

ಉಃ

(ಮೇಲಿನ ಆರೋಪಿತನ ಹೇಳಿಕೆಯನ್ನು ನನ್ನ ಸಮಕ್ಷಮ ನನ್ನಿಂದ ಆರೋಪಿತನಿಗೆ ತಿಳಿದ ಭಾಷೆಯಲ್ಲಿ ಪ್ರಶ್ನೆಗಳನ್ನು ಓದಿ, ತಿಳಿಸಿ ಹೇಳಿದ್ದು, ಅವುಗಳನ್ನು ತಿಳಿದುಕೊಂಡು ಅವರು ಕೊಟ್ಟ ಉತ್ತರಗಳನ್ನು ಅವರಂತೆಯೇ ದಿನಾಂಕ 24-02-2026ರಂದು ದಾಖಲಿಸಿಕೊಳ್ಳಲಾಗಿದೆ)

ಜೇವರ್ಗಿ
24-02-2026

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ